ವಿಶಾಖ ಎನ್.



# ಮರುಬಿಡುಗಡೆಯ ಮಾಹೆ ಮಾರ್ಚ್

ಕರ್ನಾಟಕದ ಕೆಲವೆಡೆ ನಟ ದರ್ಶನ್ ಸಿನಿಮಾಗಳು ಮರು ಬಿಡುಗಡೆಯಾಗಿ ಪೋಸ್ಟರ್‌ಗಳು ಹಳೆಯ ನೆನಪುಗಳನ್ನು ಕಾಣಿಸತೊಡಗಿವೆ. ಇದೇ ಹೊತ್ತಿನಲ್ಲಿ ಭಾರತದ ಕೆಲವು ಭಾಗಗಳಲ್ಲಿ ಹಳೆಯ ಸಿನಿಮಾಗಳ ಮರುಬಿಡುಗಡೆಯ ತಿಂಗಳು ಎಂದು ಮಾರ್ಚ್ ಗುರುತಾಗಿರುವುದು ಕಾಕತಾಳೀಯ.

ಇದು ಪರೀಕ್ಷೆಯ ಸಮಯ. ಏಪ್ರಿಲ್ ಮೊದಲ ವಾರದವರೆಗೆ ಕುಟುಂಬದವರು ಚಿತ್ರಮಂದಿರಗಳಿಗೆ ಬರುವುದು ಅತ್ಯಪರೂಪ. ಹೀಗಾಗಿ ಪ್ರಮುಖ ಸಿನಿಮಾಗಳನ್ನು ಮಾರ್ಚ್‌ನಲ್ಲಿ ತೆರೆಕಾಣಿಸಲು ನಿರ್ಮಾಪಕರು ಹಿಂಜರಿಯುವುದು ಸಹಜ. ಚಿತ್ರಮಂದಿರಗಳಲ್ಲಿ ಪ್ರದರ್ಶನ ಚಾಲೂ ಇರಲೇಬೇಕಲ್ಲ. ಅದಕ್ಕೇ ಕೆಲವು ಹಳೆಯ ಸಿನಿಮಾಗಳ ಮರು ಬಿಡುಗಡೆಗೆ ಪಿವಿಆರ್ ಕೂಡ ಒಲವು ತೋರಿಸಿದೆ.

ಇಮ್ತಿಯಾಜ್ ಅಲಿ ನಿರ್ದೇಶನದ ‘ಜಬ್ ವಿ ಮೆಟ್’, ‘ಲೈಲಾ ಮಜ್ನೂ’ ಹಾಗೂ ‘ರಾಕ್‌ಸ್ಟಾರ್’, ಮಾಧವನ್ ನಾಯಕರಾಗಿದ್ದ, ಗೌತಮ್ ವಾಸುದೇವ್ ಮೆನನ್ ನಿರ್ದೇಶನದ ‘ರೆಹ್ನಾ ಹೈ ತೇರೆ ದಿಲ್ಮೆ’, ಸಲ್ಮಾನ್ ಖಾನ್ ವೃತ್ತಿಬದುಕಿನ ಆರಂಭದ ದಿನದ ಬ್ಲಾಕ್ ಬಸ್ಟರ್ ಚಿತ್ರ ‘ಮೈನೆ ಪ್ಯಾರ್ ಕಿಯಾ’, ಹೃತಿಕ್ ರೋಷನ್ ನಟಿಸಿದ್ದ ‘ಲಕ್ಷ್ಯ’, ಅನುರಾಗ್ ಕಶ್ಯಪ್ ನಿರ್ದೇಶಿಸಿ ಸಂಚಲನ ಮೂಡಿಸಿದ್ದ ‘ಗ್ಯಾಂಗ್ಸ್ ಆಫ್ ವಸೇಪುರ್’, 1993ರಲ್ಲಿ ತೆರೆಕಂಡಿದ್ದ ಗೋವಿಂದ ಅಭಿನಯದ ‘ಆಂಖೇ’ ಮಾರ್ಚ್‌ನಲ್ಲಿ ಮತ್ತೆ ತೆರೆಕಂಡು ಕೆಲವು ಚಿತ್ರರಸಿಕರನ್ನು ಹಳೆಯ ನೆನಪಿನ ಅಲೆಮೇಲೆ ತೇಲಿಸಿದ ಚಿತ್ರಗಳು.

ಇವಷ್ಟೇ ಅಲ್ಲ, ಇಮ್ತಿಯಾಜ್ ಅಲಿ ಅವರದ್ದೇ ನಿರ್ದೇಶನದ ‘ಹೈವೆ’ ಮಹಿಳಾ ದಿನಾಚರಣೆಯ ಸಂದರ್ಭದಲ್ಲಿ ಕೆಲವು ಚಿತ್ರಮಂದಿರಗಳಲ್ಲಿ ತೆರೆಕಂಡಿತ್ತು. ಆಲಿಯಾ ಭಟ್ ನಟನಾ ಬದುಕಿಗೆ ತಿರುವು ಕೊಟ್ಟ ಸಿನಿಮಾ ಇದು. ವಿಕಾಸ್ ಬೆಹ್ಲ್ ನಿರ್ದೇಶಿಸಿದ್ದ ‘ಕ್ವೀನ್’ ಚಿತ್ರವನ್ನೂ ಮಹಿಳಾ ದಿನಾಚರಣೆ ಸಂದರ್ಭದಲ್ಲಿ ಮರು ಬಿಡುಗಡೆ ಮಾಡಲಾಗಿತ್ತು. ಕಂಗನಾ ರನೌತ್ ಈ ಚಿತ್ರದ ನಾಯಕಿ.

ಮಧುರ್ ಭಂಡಾರ್ಕರ್ ಅವರ ‘ಫ್ಯಾಷನ್’, ವಿಕ್ರಮಾದಿತ್ಯ ಮೋಟ್ವಾನೆ ನಿರ್ದೇಶಿಸಿದ್ದ ‘ಲೂಟೇರಾ’, ಕತ್ರಿನಾ ಕೈಫ್ ನಟಿಸಿದ್ದ ‘ನಮಸ್ತೆ ಲಂಡನ್’ ಮರು ಬಿಡುಗಡೆಯಾದ ಚಿತ್ರಗಳ ಪಟ್ಟಿಯಲ್ಲಿವೆ. ಮರ್ಯಾದೆಗೇಡು ಹತ್ಯೆಯ ಕಥಾವಸ್ತು ಒಳಗೊಂಡು, 2016ರಲ್ಲಿ ತೆರೆಕಂಡಿದ್ದ ಮರಾಠಿ ಚಿತ್ರ ‘ಸೈರಾಟ್’ ಹಿಂದಿ, ಕನ್ನಡ ಸೇರಿದಂತೆ ಕೆಲವು ಭಾಷೆಗಳಲ್ಲಿ ರೀಮೇಕ್ ಆಗಿದೆ. ನಾಗರಾಜ್ ಮಂಜುಳೆ ನಿರ್ದೇಶನದ ಮರಾಠಿ ಚಿತ್ರವನ್ನು ಮಹಾರಾಷ್ಟ್ರದ ಹಲವು ಭಾಗಗಳಲ್ಲಿ ಮರು ಬಿಡುಗಡೆ ಮಾಡಲಾಗಿತ್ತು. ಕೆಲವು ಪ್ರದರ್ಶನಗಳು ಹೌಸ್ ಫುಲ್ ಕೂಡ ಆದದ್ದು ವಿಶೇಷ.

ಮಾರ್ಚ್14 ಅಮೀರ್ ಖಾನ್ ಹುಟ್ಟಿದ ದಿನ. ಇದನ್ನೇ ನೆಪವಾಗಿಸಿಕೊಂಡು ಅಂದಿನಿಂದ ಮಾರ್ಚ್ 27ರವರೆಗೆ ‘ಅಮೀರ್ ಖಾನ್: ಸಿನಿಮಾ ಕಾ ಜಾದೂಗರ್–ಫ್ರಮ್ ತಾರೆ ಜಮೀನ್ ಪರ್ ಟು ದಂಗಲ್’ ಎಂಬ ಶೀರ್ಷಿಕೆಯಡಿ ಚಿತ್ರೋತ್ಸವವನ್ನು ಪಿವಿಆರ್ ಆಯೋಜಿಸುತ್ತಿದೆ. ‘ಸರ್ಫರೋಷ್’, ‘ರಂಗ್ದೆ ಬಸಂತಿ’, ‘ಗುಲಾಮ್’, ‘ದಂಗಲ್’, ‘ಲಗಾನ್’, ‘ತಲಾಷ್’ ಒಳಗೊಂಡಂತೆ ಅಮೀರ್ ಖಾನ್ ಅಭಿನಯದ ಪ್ರಮುಖ ಚಿತ್ರಗಳು ಚಿತ್ರೋತ್ಸವದಲ್ಲಿ ಪ್ರದರ್ಶಿತವಾಗುತ್ತಿವೆ. ಹೊಸ ಚಿತ್ರಗಳ ಬಿಡುಗಡೆಯ ಬರವನ್ನು ನೀಗಿಸಿಕೊಳ್ಳಲು ಪಿವಿಆರ್ ಕಂಡುಕೊಂಡಿರುವ ಈ ದಾರಿ ಆಸಕ್ತಿಕರವಾಗಿದೆ.



## ಪೃಥ್ವಿರಾಜ್ ನಿರ್ದೇಶನದ ಇನ್ನೊಂದು ಚಿತ್ರ

‘ಲೂಸಿಫರ್’ ಮಲೆಯಾಳ ಸಿನಿಮಾ ಹಿಟ್‌ಆದ ನಂತರ ಅದರದ್ದೇ ಸರಣಿ ಚಿತ್ರಗಳು ಬರಲಿವೆ ಎಂದು ನಿರೀಕ್ಷಿಸಲಾಗಿತ್ತು. ಆದರೆ, ಅದೇ ಶೀರ್ಷಿಕೆ ಇಟ್ಟು, ಭಾಗ– ಎರಡು ಎನ್ನುವ ಹಳೆಯ ಪರಿಪಾಟವನ್ನು ನಿರ್ದೇಶಕ ಪೃಥ್ವಿರಾಜ್ ಸುಕುಮಾರನ್ ಬಿಟ್ಟಿದ್ದಾರೆ. ಅವರು ನಿರ್ದೇಶಿಸಿರುವ ಹೊಸ ಚಿತ್ರದ ಶೀರ್ಷಿಕೆ: ‘ಎಲ್: ಎಂಪುರಾನ್’; ಚುಟುಕಾಗಿ ಇದನ್ನು ‘ಎಲ್‌ಇ’ ಎಂದು ಅವರು ಕರೆಯಬೇಕೆಂದು ಕೋರಿದ್ದಾರೆ. 2019ರಲ್ಲಿಯೇ ಈ ಸಿನಿಮಾ ಆಲೋಚನೆ ಮೊಳೆತಿತ್ತು. ಕೋವಿಡ್ ದುರಿತ ಕಾಲದಿಂದಾಗಿ ಚಿತ್ರೀಕರಣ ನಡೆಸುವುದು ತಡವಾಯಿತು. ಮೋಹನ್ ಲಾಲ್ ನಾಯಕರಾಗಿ ಅಭಿನಯಿಸಿರುವ ಈ ಸಾಹಸ ಪ್ರಧಾನ ಚಿತ್ರದಲ್ಲಿ ಖುದ್ದು ಪೃಥ್ವಿರಾಜ್ ಮುಖ್ಯಪಾತ್ರದಲ್ಲಿ ನಟಿಸಿದ್ದಾರೆ. ಟೊವಿನೊ ಥಾಮಸ್, ಇಂದ್ರಜಿತ್ ಸುಕುಮಾರನ್, ಮಂಜು ವಾರಿಯರ್, ಸಾನಿಯಾ ಇಳಯಪ್ಪನ್ ತಾರಾಗಣದಲ್ಲಿ ಸೇರಿದ್ದಾರೆ.

ಮೂರು ತಾಸು ಅವಧಿಯ ಚಿತ್ರವು ಮಾರ್ಚ್ 27ರಂದು ತೆರೆಕಾಣಲಿದೆ. ಇದು ಯಶಸ್ವಿಯಾದಲ್ಲಿ ಇದೇ ಪ್ರಭೇದದ ಮತ್ತೊಂದು ಚಿತ್ರ ಮಾಡುವ ಆಲೋಚನೆಯೂ ಪೃಥ್ವಿರಾಜ್ ಅವರಿಗೆ ಇದೆ.